ಸಿ.ಸಿ .ನಂ. 343/2023 ಪಿಡಬ್ಲೂಃ 1

ದಿನಾಂಕಃ 01-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಸ್ ಆರ್ ಎಸ್ ವಕೀಲರಿಂದಃ**

4. ಆರೋಪಿಗೆ 2020 ರಲ್ಲಿ ಸಾಲವನ್ನು ಕೊಟ್ಟಿರುತ್ತೇವೆ. ಸಾಲದ ಒಂದು ಕಂತು ಕಟ್ಟದೇ ಇದ್ದರೂ ಕೂಡ ಕಟಬಾಕಿಯಾಗಿರುತ್ತದೆ. ಮೂರು ಕಂತು ಕಟ್ಟದೇ ಇದ್ದರೆ ಎನ್ ಪಿ ಎ ಆಗುತ್ತದೆ . ಈ ಪ್ರಕರಣದಲ್ಲಿ ಯಾವಾಗ ಎನ್ ಪಿ ಎ ಆಗಿದೆ ದಾಖಲಾತಿ ನೋಡಿ ಹೇಳಬೇಕು . ಸಾಕ್ಷಿ ದಾಖಲಾತಿಯನ್ನು ನೋಡಿ ಈ ಪ್ರಕರಣದಲ್ಲಿ ಮಾರ್ಚ 2021 ರಂದು ಎನ್ ಪಿ ಎ ಆಗಿದೆ ಎಂದು ನುಡಿದಿರುತ್ತಾರೆ . ನಾವು ಪ್ರತಿ ತಿಂಗಳು ಅವರು ಎಷ್ಟು ಹಣ ಕಟ್ಟಿದ್ದಾರೆ , ಎಷ್ಟು ಬಡ್ಡಿ ಆಕರಣೆ ಮಾಡಿದ್ದೇವೆ ಹಾಗೂ ಸಾಲದ ಹಣ ಬಾಕಿ ಎಷ್ಟಿದೆ ಪಾರದರ್ಶಕವಾಗಿ ಸ್ಟೇಟ್ ಮೆಂಟ್ ಲ್ಲಿ ತೋರಿಸಬೇಕಾಗುತ್ತದೆ ಎಂದರೆ ಸರಿ. ದಿಃ 07-11-2020 ರಿಂದ ದಿಃ 01-01-2022 ರವರೆಗಿನ ಪ್ರತಿ ತಿಂಗಳ ಸ್ಟೇಟ್ ಮೆಂಟ್ ಪಾರದರ್ಶಕವಾಗಿ ನಾವು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಅವರು ಎಲ್ಲಿಯವರೆಗೆ ಹಣ ತುಂಬಿದ್ದಾರೆ ಅಲ್ಲಿಯವರೆಗೆ ಸ್ಟೇಟ್ ಮೆಂಟ್ ನ್ನು ಹಾಜರು ಪಡಿಸಿದ್ದೇವೆ ಎಂದು ನುಡಿದಿರುತ್ತಾರೆ. ಸಾಲಗಾರ ಹಣವನ್ನು ತುಂಬದೇ ಇದ್ದರೆ ಸ್ಟೇಟ್ ಮೆಂಟ್ ನ್ನು ತಯಾರು ಮಾಡುವುದಿಲ್ಲ ಎಂದರೆ ಸರಿಯಲ್ಲ . ಎನ್ ಪಿ ಎ ಆದ ನಂತರ ಆ ವ್ಯಕ್ತಿಯ ವಿರುದ್ಧ ಸಹಾಯಕ ನಿಬಂಧಕರ ಕೋರ್ಟಿನಲ್ಲಿ ಪ್ರಕರಣ ದಾಖಲಿಸಬೇಕಾಗುತ್ತದೆ ಎಂದರೆ ಸಾಕ್ಷಿ ಆರ್ಬಿಟ್ರೇಶನ್ ಕೇಸ್ ಹಾಕಿದ್ದೇವೆ ದಿನಾಂಕ ನೆನಪಿಲ್ಲ ಎಂದು ನುಡಿದಿರುತ್ತಾರೆ . ಆರ್ಬಿಟ್ರೇಶನ್ ಕೇಸ್ ದಾಖಲಿಸಿದ ಬಗ್ಗೆ ಪುರಾವೆಯಾಗಿ ದಾಖಲಾತಿ ಹಾಜರು ಪಡಿಸಲು ತೊಂದರೆ ಇಲ್ಲ . ಆರ್ಬಿಟ್ರೇಶನ್ ಕೇಸ್ ನಲ್ಲ ನೋಟಿಸು ಇನ್ನೂ ಆರೋಪಿಗೆ ಬಂದಿಲ್ಲ ಎಂದರೆ ಸಾಕ್ಷಿ ದಾಖಲಾತಿ ನೋಡಿ ಹೇಳಬೇಕು ಎಂದು ನುಡಿದಿರುತ್ತಾರೆ. ನಾವು ಬಡ್ಡಿಯನ್ನು ಹೆಚ್ಚಿಗೆ ಆಕರಣೆ ಮಾಡಿದ್ದೇವೆ ಅಥವಾ ಕಡಿಮೆ ಆಕರಣೆ ಮಾಡಿದ್ದೇವೆ ಅಥವಾ ಸರಿಯಾಗಿ ಆಕರಣೆ ಮಾಡಿದ್ದೇವೆ ಅದನ್ನು ನಿರ್ಣಯಿಸುವ ಅಧಿಕಾರ ಆರ್ಬಿಟ್ರೇಶನ್‌ನವರಿಗೆ ಮಾತ್ರ ಇರುತ್ತದೆ ಎಂದರೆ ಗೊತ್ತಿಲ್ಲ. ನಾವು ನೇರವಾಗಿ ಚೆಕ್ ನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದರಿಂದ ಬಡ್ಡಿ ಜಾಸ್ತಿ ಆಕರಣೆ ಮಾಡಿದ್ದೇವೋ , ಕಡಿಮೆ ಆಕರಣೆ ಮಾಡಿದ್ದೇವೋ ತೀರ್ಮಾನ

ಮಾಡಲು ಆಗುವುದಿಲ್ಲ ಎಂದರೆ ಸಾಕ್ಷಿ ಚೆಕ್ ಅವರೇ ಕೊಟ್ಟಿದ್ದರು ಎಂದು ನುಡಿದಿರುತ್ತಾರೆ. ನಾವು ಇಂತಿಷ್ಟು ಹಣ ಬಾಕಿ ಇದೆ ಎಂದು ಹೇಳಿದಾಗ ಅವರು ಚೆಕ್ ನ್ನು ಕೊಡುತ್ತಾರೆ ಎಂದರೆ ಸರಿ . ಕಾನೂನು ಪ್ರಕಾರ ಯಾವುದೇ ಸೌಹಾರ್ದ ಹಾಗೂ ಸಹಕಾರಿಗೆ 13% ಕ್ಕಿಂತ ಜಾಸ್ತಿ ಬಡ್ಡಿ ಆಕರಣೆ ಮಾಡಲು ಬರುವುದಿಲ್ಲ ಎಂದರೆ ಗೊತ್ತಿಲ್ಲ. ಅದನ್ನು ಪಾಲಿಸುವುದು ಎಲ್ಲರ ಕರ್ತವ್ಯ ಎಂದರೆ ಸರಿ . ಆರೋಪಿಯ ಸಾಲ ಕಟ್ ಬಾಕಿಯಾದ ನಂತರ ಹಾಗೂ ಆರ್ಬಿಟ್ರೇಶನ್‌ನಲ್ಲಿ ತೀರ್ಮಾನ ಆಗದೇ ನಾವು ಚೆಕ್ ನಿಂದ ಹಣವನ್ನು ಸ್ವೀಕರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ.

5. ನಾವು ಆರೋಪಿಯ ಸಾಲದ ಹಣದಿಂದ 10%ಎಫ್ ಡಿ ಹಣ ಇಟ್ಟುಕೊಂಡಿದ್ದೇವೆ ಎಂದರೆ ಸಾಕ್ಷಿ ಅವರೇ ಮಾಡಿಸಿರುತ್ತಾರೆ ಎಂದು ನುಡಿದಿರುತ್ತಾರೆ . ನಮ್ಮ ಬ್ಯಾಂಕಿನ ಶರತ್ತಿನ ಅನ್ವಯ ಅವರು ರೂ . 5,300/-ರೂಪಾಯಿ ಡೆಪಾಜಿಟ್ ಮಾಡಿದ್ದಾರೆ ಎಂದರೆ ಸರಿ . ಚೆಕ್ ಬೋನ್ಸ ಆಗುವ ಪೂರ್ವದಲ್ಲಿ ರೇವಣಿಯ ಹಣದ ಮೇಲೆ ಬಡ್ಡಿ ಎಷ್ಟಾಗಿದೆ ಹಾಗೂ ರೇವಣಿ ಹಣ ಎಷ್ಟಾಗಿದೆ ಆರೋಪಿಗೆ ತಿಳಿಸಿಲ್ಲ ಹಾಗೂ ನ್ಯಾಯಾಲಯಕ್ಕೂ ತಿಳಿಸಿಲ್ಲ ಎಂದರೆ ಸಾಕ್ಷಿ ಅವರಿಗೆ ಗೊತ್ತಿರುತ್ತದೆ ಎಂದು ನುಡಿದಿರುತ್ತಾರೆ . ಎನ್ ಪಿ ಎ ಮಾಡುವ ಮೊದಲು ಎಫ್ ಡಿ ಹಣವನ್ನು ಆರೋಪಿ ಸಾಲದ ಖಾತೆಗೆ ಜಮಾ ಮಾಡಿಕೊಂಡಿಲ್ಲ . ಎಫ್ ಡಿ ಹಣವನ್ನು ಅಲ್ಲದೇ ನಾವು ಆರೋಪಿಯ ಎಲ್ ಐ ಸಿ ಪಾಲಿಸಿಯನ್ನು ಭದ್ರತೆಗಾಗಿ ಸ್ವೀಕರಿಸಿದ್ದೇವೆ ಎಂದರೆ ಸರಿ. ಪಾಲಿಸಿ ಹಣವನ್ನು ಆರೋಪಿಯ ಸಾಲದ ಖಾತೆಗೆ ಜಮಾ ಪಡಿಸಿಲ್ಲ. ಚೆಕ್ ಬೋನ್ಸ ಆಗಲು ಕಾರಣ ನಾವು ತಪ್ಪು ಲೆಕ್ಕ ಕೊಟ್ಟಿದ್ದು ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.